**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 67 ಯುಎಂವಿ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:08.08.2024

**ಇವರಿಂದ,**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

**ಇವರಿಗೆ,**
ಕುಲಸಚಿವರು,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು

ಮಾನ್ಯರೇ,

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ Chandrashekar Foundation ಅಡಿ ಕಾರ್ಯನಿರ್ವಹಿಸುತ್ತಿರುವ Cauvery Health Science and Management, Mysore ಈ ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ BCA, BBA, MCA and MBA ಕೋರ್ಸುಗಳನ್ನು ಪ್ರಾರಂಭಿಸಲು ಸಂಯೋಜನೆ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂ. ಇಡಿ 29 ಯುಎನ್‌ಇ 2021, ದಿನಾಂಕ:12.02.2021.
2. ಮೈಸೂರು ವಿಶ್ವವಿದ್ಯಾನಿಲಯದ ಆನ್‌ಲೈನ್ ವರದಿ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ Chandrashekar Foundation ಅಡಿ ಕಾರ್ಯನಿರ್ವಹಿಸುತ್ತಿರುವ Cauvery Health Science and Management, Mysore ಈ ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ BCA, BBA, MCA and MBA ಕೋರ್ಸುಗಳನ್ನು ಪ್ರಾರಂಭಿಸಲು ಸಂಯೋಜಿಸುವ ಬಗ್ಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(11) ರಡಿ ಅಗತ್ಯವಾಗುವ ಸರ್ಕಾರದ ಶಿಫಾರಸ್ಸು ಕೋರಿ ಕಾಲೇಜಿನ ಅರ್ಜಿ, ಸ್ಥಳೀಯ ವಿಚಾರಣೆ ಸಮಿತಿಯ ವರದಿ ಹಾಗೂ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ತುಗಳ ಗೊತ್ತುವಳಿಗಳ ದಾಖಲೆಗಳೊಂದಿಗೆ UUCMS ಆನ್ ಲೈನ್ ತಂತ್ರಾಂಶದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಸ್ಥಳೀಯ ವಿಚಾರಣೆ ಸಮಿತಿಯ ಅವಲೋಕನ ಮತ್ತು ತೀರ್ಮಾನಗಳನ್ನು ಪರಿಗಣಿಸಿದ ತರುವಾಯ ಮೈಸೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳು ಅಂಗೀಕರಿಸಿದ ಗೊತ್ತುವಳಿಗಳನ್ನು ಅನುಸರಿಸಿ ಹಾಗೂ ಶೈಕ್ಷಣಿಕ/ಭೌತಿಕ ಹಾಗೂ ನಾಗರೀಕ ಮೂಲಸೌಕರ್ಯಗಳ ಲಭ್ಯತೆ ಹಾಗೂ ಗುಣಮಟ್ಟದ ಕಾರ್ಯನಿರ್ವಹಣೆಯ ಖಚಿತತೆಗಾಗಿ ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಲಾದ ನಿಯತಾಂಕಗಳ ಹಾಗೂ ಸೂಚ್ಯಂಕಗಳ ಪೂರೈಕೆಯನ್ನು ದೃಢಪಡಿಸಿಕೊಂಡು, ಪ್ರಸ್ತಾವನೆಗಳನ್ನು ಷರತ್ತುಗಳಿಗೆ ಒಳಪಟ್ಟು ಪರಿಗಣಿಸಲಾಗಿದೆ.

ತತ್ಪರಿಣಾಮವಾಗಿ, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ Chandrashekar Foundation ಅಡಿ ಕಾರ್ಯನಿರ್ವಹಿಸುತ್ತಿರುವ Cauvery Health Science and Management, Mysore ಈ ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡಂತೆ ವಿದ್ಯಾರ್ಥಿ

..2

ಪ್ರವೇಶಾತಿಯೊಂದಿಗೆ ಹೊಸದಾಗಿ ಕೋರ್ಸುಗಳನ್ನು ಪ್ರಾರಂಭಿಸಲು ಸಂಯೋಜನೆ ನೀಡುವ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(11)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

| ಕಾಲೇಜಿನ ಹೆಸರು | ಕೋರ್ಸ್‌ಗಳ ವಿವರ | ವಿದ್ಯಾರ್ಥಿ ಪ್ರಮಾಣ |
|---|---|---|
| Cauvery Health Science and Management, Mysore | BCA | 60 |
| | BBA | 60 |
| | MCA | 120 |
| | MBA | 120 |

ಆನ್ ಲೈನ್ ಪ್ರಸ್ತಾವನೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿಯಲ್ಲಿರುವ ಎಲ್ಲಾ ಮಾನದಂಡಗಳನ್ನು ಪ್ರಸ್ತಾಪಿತ ಕಾಲೇಜು ಪೂರೈಸುವ ಮೂಲಕ ಎಲ್ಲಾ ನಿಯತಾಂಕಗಳನ್ನು **ಒಂದು ವರ್ಷದೊಳಗಾಗಿ ಪೂರೈಸತಕ್ಕದ್ದು,** ತಪ್ಪಿದಲ್ಲಿ ಹೊಸ ಕೋರ್ಸ್ ಮತ್ತು ವಿಷಯ ಸಂಯೋಜನೆಗೆ ಈ ಪತ್ರದಲ್ಲಿ ಮಾಡಲಾಗಿರುವ ಶಿಫಾರಸ್ಸು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತದೆ.

2024-25ನೇ ಸಾಲಿನ ಸ್ಥಳೀಯ ವಿಚಾರಣೆ ಸಮಿತಿಯಿಂದ ಅವಲೋಕಿಸಲಾಗಿರುವಂತೆ ನೇಮಕಾತಿಗಳಲ್ಲಿ ಮೀಸಲಾತಿ ರೋಸ್ಟರ್ ಪಾಲಿಸತಕ್ಕದ್ದು. ತಪ್ಪಿದಲ್ಲಿ, 2024-25ನೇ ಸಾಲಿನಿಂದ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೂಚಿಸಲಾಗಿದೆ.

Cauvery Health Science and Management, Mysore ಕಾಲೇಜಿಗೆ 2024-25ನೇ ಶೈಕ್ಷಣಿಕ ಸಾಲಿನಿಂದ ಮೇಲ್ಕಂಡಂತೆ ಹೊಸ ಕೋರ್ಸು ಮತ್ತು ವಿಷಯ ಸಂಯೋಜನೆ ನೀಡುವುದು ಪೂರ್ವ ಪ್ರಸ್ತಾಪಿತ ಷರತ್ತುಗಳು ಸೇರಿದಂತೆ ಈ ಕೆಳಕಂಡ ಎಲ್ಲಾ ಷರತ್ತುಗಳನ್ನು ಪಾಲಿಸುವ ನಿಬಂಧನೆಗೆ ಒಳಪಟ್ಟಿರುತ್ತದೆ.

1. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು.
2. ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
3. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
4. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
6. ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ), ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

7. ದಿನಾಂಕ: 13-8-1997 ರಂದು ವಿಶಾಖ v/s ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸತಕ್ಕದ್ದು, ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.
8. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು, ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.
9. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದಲ್ಲ.
10. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.
11. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
12. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
13. ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್ಇ 2021, ದಿನಾಂಕ: 12.02.2021 ರಲ್ಲಿ ತಿಳಿಸಿರುವ ಎಲ್ಲಾ ನಿಯತಾಂಕಗಳನ್ನು 06 ತಿಂಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು.
14. ವಿಶ್ವವಿದ್ಯಾಲಯವು ಆನ್‌ಲೈನ್ ಮೂಲಕ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ LIC ಕಮಿಟಿಯು ನೀಡಿರುವ ವರದಿಯಲ್ಲಿನ ಎಲ್ಲಾ ಮಾನದಂಡಗಳನ್ನು 06 ತಿಂಗಳೊಳಗಾಗಿ ಪೂರೈಸತಕ್ಕದ್ದು.
15. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59ರಲ್ಲಿನ ಮಾನದಂಡಗಳು ಹಾಗೂ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಸಂಬಂಧಿಸಿದ ಕಾಲೇಜು ಪಾಲಿಸಿವೆಯೇ ಎಂಬುದರ ಕುರಿತಾಗಿ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ವಿಶ್ವವಿದ್ಯಾಲಯವು ಸಂಪೂರ್ಣ ಜವಾಬ್ದಾರಿಯಾಗಿರುತ
16. ಈ ಮೇಲ್ಕಂಡ ಷರತ್ತುಗಳನ್ನು ಸಂಬಂಧಪಟ್ಟ ಕಾಲೇಜು ಒಂದು ವೇಳೆ ಪೂರೈಸದಿದ್ದಲ್ಲಿ, ಈ ಆದೇಶವು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ತಮ್ಮ ನಂಬುಗೆಯ,

08/08/24
(ಶಶಿಕಲಾ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

**ಪ್ರತಿ:-**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು
2. ಅಧ್ಯಕ್ಷರು, Chandrashekar Foundation, ಮೈಸೂರು
3. ಪ್ರಾಂಶುಪಾಲರು, Cauvery Health Science and Management, Mysore
4. ಇ-ಸಮನ್ವಯಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ ಇವರಿಗೆ (ಉನ್ನತ ಶಿಕ್ಷಣ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು)